ಆ) ಬಂದಿದ್ದಲ್ಲಿ, ಸದರಿ ಕಾಲುವೆಗಳ ದುರಸ್ಥಿಗೆ ಸರ್ಕಾರ ಕೂಡಲೇ ಅನುದಾನವನ್ನು ಬಿಡುಗಡೆ ಮಾಡುವುದೇ?

ಶ್ರೀ ಬಸವರಾಜ್ ಬೊಮ್ಮಾಯಿ (ಜಲಸಂಪನ್ಮೂಲಗಳ ಸಚಿವರು):–

ಅ) ಕುಣಿಗಲ್ ತಾಲ್ಲೂಕು, ಮಾರ್ಕೋನಹಳ್ಳಿ ಹಾಗೂ ಮಂಗಳಾ ಜಲಾಶಯಗಳ ನೀರಾವರಿ ಕಾಲುವೆಗಳಲ್ಲಿ ಹೂಳು ತುಂಬಿರುವುದು ಗಮನಕ್ಕೆ ಬಂದಿದ್ದು, ಕಾಲುವೆಗಳಲ್ಲಿ ತುಂಬಿದ್ದ ಹೂಳನ್ನು 2011–12ನೇ ಸಾಲಿನಲ್ಲಿ ಮುಂಗಾರು ಹಂಗಾಮಿಗೆ ನೀರು ಹರಿಸುವ ಮುಂಚಿತವಾಗಿ ತೆಗೆದು ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ ಹಾಗೂ ಸಮರ್ಪಕವಾಗಿ ಅಚ್ಚುಕಟ್ಟಿಗೆ ನೀರನ್ನು ಸರಬರಾಜು ಮಾಡಲಾಗಿದೆ.

ಆ) ಈ ಸಾಲಿನಲ್ಲಿ ನಾಲಾ ನಿರ್ವಹಣೆ ಹಾಗೂ ದುರಸ್ಥಿಗೆ ಒಟ್ಟು ರೂ. 40.60 ಲಕ್ಷ ಅನುದಾನ ಒದಗಿಸಲಾಗಿದೆ.

ಕಾರ್ಖಾನೆ ಅಭಿವೃದ್ಧಿ ಪಡಿಸುವುದು

46 (237) ಶ್ರೀ ಸಂಗಮೇಶ್ವರ ಬಿ. ಕೆ. (ಭದ್ರಾವತಿ):– ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಭದ್ರಾವತಿಯ ಕಾಗದ ಮತ್ತು ಸಕ್ಕರೆ ಕಾರ್ಖಾನೆ ಅಭಿವೃದ್ಧಿ ಹಾಗೂ ಆಧುನೀಕರಣಕ್ಕೆ ಹೊಸ ಯಂತ್ರಗಳನ್ನು ಅಳವಡಿಸಬೇಕೆಂದು ಮನವಿ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಎಂದು ಅನುದಾನವನ್ನು ಬಿಡುಗಡೆ ಮಾಡಲಾಗುವುದು;

ಆ) ಸದರಿ ಕಾರ್ಖಾನೆಗಳ ನೌಕರರುಗಳಿಗೆ ತುಟ್ಟಿಭತ್ಯೆ ನೀಡುವುದು ವಿಳಂಭವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಎಂದು ನೀಡಲಾಗುವುದು.

ಶ್ರೀ ಮುರುಗೇಶ್ ಆರ್. ನಿರಾಣಿ (ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು):–

ಅ) ಬಂದಿದೆ. ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ

ಆ) ಬಂದಿದೆ. ದಿನಾಂಕ 25–8–94ರ ಸರ್ಕಾರಿ ಸುತ್ತೋಲೆ ಸಂಖ್ಯೆ ಡಿಪಿಎಆರ್ (ಬಿಪಿಇ) 123 ಎಸ್.ಪಿ.ಯು 93 ರನ್ವಯ, ಹೆಚ್ಚುವರಿ ತುಟ್ಟಿಭತ್ಯೆ ವೆಚ್ಚವನ್ನು ಸಾರ್ವಜನಿಕ

ಉದ್ದಿಮೆಗಳು ಸರ್ಕಾರದಿಂದ ಯಾವುದೇ ಆರ್ಥಿಕ ಸಹಾಯವಿಲ್ಲದೆ ತಮ್ಮ ಅಂತರಿಕ ಸಂಪನ್ಮೂಲಗಳಿಂದ ಭರಿಸಬೇಕು ಹಾಗೂ ಸದರಿ ವೆಚ್ಚದಿಂದ ಉದ್ಯಮದ ಸಂಪನ್ಮೂಲತೆಗೆ ಹಾನಿಯಗುತ್ತದೆಯೇ? ಮತ್ತು ತುಟ್ಟಿಭತ್ಯೆ ಮಂಜೂರಾತಿಯಿಂದ ಅಸ್ಥಿರತೆ ಉಂಟಾಗುತ್ತದೆಯೇ? ಎಂಬುದನ್ನು ಆಡಳಿತ ಮಂಡಳಿ ಪರಿಶೀಲಿಸಬೇಕಾಗುತ್ತದೆ. ದಿನಾಂಕ 30–09–2011ರಂದು ರೂ. 234.00 ಕೋಟಿ ಬೃಹತ್ ಮೊತ್ತದ ಕ್ರೋಢೀಕೃತ ನಷ್ಟದಿಂದ ಆರ್ಥಿಕ ಸಮಸ್ಯೆಗಳಿಂದಾಗಿ ಕಂಪನಿಯು ತನ್ನ ನೌಕರರುಗಳಿಗೆ ತುಟ್ಟಿಭತ್ಯೆಯನ್ನು ನೀಡಿರಲಿಲ್ಲ. ಆದಾಗ್ಯೂ ನೌಕರರೊಡನೆ ಉತ್ತಮ ಬಾಂಧ್ಯವನ್ನು ಹೊಂದುವ ಸಲುವಾಗಿ ಸೆಪ್ಟೆಂಬರ್ 2011ರ ನಂತರ ಆರ್ಥಿಕ ಅಡಚಣೆ ಇದ್ಯಾಗ್ಯೂ ಸಹ, ಶೇ. 10.25 ರಷ್ಟು ತುಟ್ಟಿಭತ್ಯೆಯನ್ನು ಮಾತ್ರ ಪಾವತಿಸಲಾಗಿದೆ.

ಇ) ಉದ್ಭವಿಸುವುದಿಲ್ಲ

ಭದ್ರಾ ಆಧುನೀಕರಣದಲ್ಲಿ ಸಂಪೂರ್ಣ ಕಳಪೆ ಕಾಮಗಾರಿ

47 (239) ಶ್ರೀ ಸಂಗಮೇಶ್ ಬಿ. ಕೆ. (ಭದ್ರಾವತಿ):– ಮಾನ್ಯ ಜಲಸಂಪನ್ಮೂಲಗಳ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಭದ್ರಾ ನಾಲೆ ಸಂಪೂರ್ಣ ಕಳಪೆ ಕಾಮಗಾರಿಯಾಗಿದ್ದು, ಈ ಕಾಮಗಾರಿಯನ್ನು ಮಾಡಿ ಕೇವಲ ಒಂದು ವರ್ಷವಾಗಿದ್ದು, ಈ ಕಾಮಗಾರಿಯೂ ಸಂಪೂರ್ಣವಾಗಿ ಸಿಮೆಂಟ್ ಮರಳು ಚಾನಲ್‌ನಲ್ಲಿ ಕೊಚ್ಚಿ ಹೋಗಿರುವುದಿರಂದ ಕಳಪೆ ಕಾಮಗಾರಿ ಮಾಡಿ ಸರ್ಕಾರಕ್ಕೆ ನಷ್ಟಗೊಳಿಸಿದ ಗುತ್ತಿಗೆದಾರರ ಮೇಲೆ ಮತ್ತು ಇದಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಜರುಗಿಸಲಾಗಿದೆಯೇ;

ಆ) ಇವರ ಬಗ್ಗೆ ಕಾನೂನು ಕ್ರಮ ಕೈಗೊಳ್ಳಲು ಸಾಧ್ಯವಾಗುವುದೇ?

ಶ್ರೀ ಬಸವರಾಜ್ ಬೊಮ್ಮಾಯಿ (ಜಲಸಂಪನ್ಮೂಲಗಳ ಸಚಿವರು):–

ಅ) ಭದ್ರಾ ನಾಲಾ ಜಾಲದ ಆಧುನೀಕರಣ ಕಾಮಗಾರಿಗಳನ್ನು ಪ್ರಧಾನ ಮಂತ್ರಿಗಳ ರೈತರ ಆತ್ಮಹತ್ಯೆ ಪ್ಯಾಕೇಜ್ ಅಡಿಯಲ್ಲಿ ತ್ವರಿತ ಗತಿಯಲ್ಲಿ ಕೈಗೊಳ್ಳಲು ವಿವಿಧ ಪ್ಯಾಕೇಜ್‌ಗಳನ್ನಾಗಿ ವಿಂಗಡಿಸಿ ಟೆಂಡರ್ ಆಧಾರದ ಮೇಲೆ ಗುತ್ತಿಗೆ ವಹಿಸಿ ಕಾಮಗಾರಿಗಳನ್ನು 2007–08ನೇ ಸಾಲಿನಿಂದ ನಿರ್ವಹಿಸಲಾಗುತ್ತಿದೆ.